# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಡಿ.8908/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:8.5.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:–** ತುಮಕೂರು ತಾಲ್ಲೂಕು ಚಿಕ್ಕತೊಟ್ಲುಕೆರೆ ಗ್ರಾಮದ ಖಾತೆ ನಂ.794 ನ್ನು ಶ್ರೀಮತಿ ಸಾಕಮ್ಮ ಗಂಡ ರಂಗಯ್ಯನವರ ಹೆಸರಿನಲ್ಲಿ ಪೌತಿ ವಾರಸು ಖಾತೆ ಮಾಡಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ನರಸಿಂಹಮೂರ್ತಿ, ಚಿಕ್ಕತೊಟ್ಲಕೆರೆ ಗ್ರಾಮ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀಮತಿ ಮಂಜುಳ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತು (2) ಶ್ರೀ ಶಿವಣ್ಣ, ಕಾರ್ಯದರ್ಶಿ, ಚಿಕ್ಕತೊಟ್ಲಕೆರೆ ಗ್ರಾಮಪಂಚಾಯತಿ, ತುಮಕೂರು ತಾಲ್ಲೂಕು, (ಇನ್ನು ಮುಂದೆ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ತಾಲ್ಲೂಕು ಚಿಕ್ಕತೊಟ್ಲುಕೆರೆ ಗ್ರಾಮದ ಖಾತೆ ನಂ.794 ವಿಸ್ತೀರ್ಣ 30 X 30 ಅಡಿ ನಿವೇಶನವನ್ನು ಶ್ರೀಮತಿ ಸಾಕಮ್ಮ ಗಂಡ ರಂಗಯ್ಯ ಅವರ ಹೆಸರಿಗೆ ಖಾತೆಯಿದ್ದು, ಆದರೆ ಎದುರುದಾರರು ಅಕ್ರಮವಾಗಿ ಉಮಾದೇವಿ ಗಂಡ ರಂಗಯ್ಯ ಅವರಿಗೆ 60 X 60 ಅಡಿ ನಿವೇಶನದ ಖಾತೆ ಮಾಡಿಕೊಟ್ಟಿರುತ್ತಾರೆ. ಆದರೆ ಸಾಕಮ್ಮ ಅವರಿಂದ 1984ರಿಂದ 21.11.2016ರವರೆಗೆ ಮನೆ ಕಂದಾಯ ಕಟ್ಟಿಸಿಕೊಂಡಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ದ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಚಿಕ್ಕತೊಟ್ಲುಕೆರೆ ಗ್ರಾಮದ ಖಾತೆ ನಂ.794 ನಿವೇಶನ ರಂಗಯ್ಯ ಬಿನ್ ಚಿಕ್ಕಹನುಮಯ್ಯ ಅವರ ಹೆಸರಿನಲ್ಲಿದ್ದು, ರಂಗಯ್ಯ ಮರಣಹೊಂದಿದ ನಂತರ ಅವರ ಹೆಂಡತಿ ಸಾಕಮ್ಮನವರ ಹೆಸರಿನಲ್ಲಿ ಖಾತೆ ಮಾಡಲು ದಿ.28.7.2015ರಂದು ಅರ್ಜಿ ಸಲ್ಲಿಸಿರುತ್ತಾರೆ. ಆಗ ಸ್ಥಳ

ಪರಿಶೀಲಿಸಲಾಗಿ ನಿವೇಶನದ ಅಳತೆ ಮತ್ತು ಚೆಕ್‌ಬಂದಿ ಬಗ್ಗೆ ಮೂಲ ದಾಖಲೆಗಳನ್ನು ಸಲ್ಲಿಸುವಂತೆ ತಿಳುವಳಿಕೆ ಪತ್ರ ನೀಡಲಾಗಿತ್ತು. ಆದರೆ ಮೂಲ ದಾಖಲೆ ನೀಡಿರುವುದಿಲ್ಲ. ಆದರೆ ಖಾತೆ ನಂ.794 ರಂಗಯ್ಯ ಬಿನ್ ಚಿಕ್ಕಹನುಮಯ್ಯ ಅವರ ಹೆಸರಿಗೆ ಖಾತೆ ಇರುತ್ತದೆ. ಆದ್ದರಿಂದ ಸಾಕಮ್ಮನವರ ಹೆಸರಿನಲ್ಲಾಗಲೀ ಅಥವಾ ರಂಗಯ್ಯನವರ ಹೆಂಡತಿ ಉಮಾದೇವಿ ಅವರ ಹೆಸರಿನಲ್ಲಿ ಖಾತೆ ಮಾಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರ ಹಾಜರುಪಡಿಸಿದ ದಾಖಲೆಗಳಲ್ಲಿ 2014ನೇ ಸಾಲಿನ ತೆರಿಗೆ ಬೇಡಿಕೆ ರಿಜಿಸ್ಟರಿನಲ್ಲಿ ಕ್ರಮ ಸಂ.794 ರಂಗಯ್ಯ ಬಿನ್ ಚಿಕ್ಕ ಹನುಮಯ್ಯನವರ ಹೆಸರಿನಲ್ಲಿರುತ್ತದೆ. ಆದರೆ ಇದರಲ್ಲಿ ನಿವೇಶನದ ಅಳತೆ ನಮೂದಿಸಿರುವುದಿಲ್ಲ. ಆದರೆ ಈ ರಂಗಯ್ಯನು ಸಾಕಮ್ಮನವರ ಗಂಡನೆಂದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಉಲ್ಲೇಖಿಸಿರುತ್ತಾರೆ. ದೂರುದಾರರು ಕೆಲವು ಕರ ಪಾವತಿಗಳನ್ನು ಹಾಜರುಪಡಿಸಿದ್ದು, ಇದರಲ್ಲಿ ರಂಗಯ್ಯ ಬಿನ್ ಹನುಮಯ್ಯನವರ ಹೆಸರು ನಮೂದಾಗಿರುತ್ತದೆ. ದಿ.1.2.1984ರ ಕರಪಾವತಿಯಿದ್ದು, ಇದರಲ್ಲಿ ರಂಗಯ್ಯನ ತಂದೆ ಚಿಕ್ಕಹನುಮಯ್ಯನ ಹೆಸರಿನಲ್ಲಿರುತ್ತದೆ. ಈಗಾಗಲೇ ಸಾಕಮ್ಮನ ಗಂಡ ರಂಗಯ್ಯನ ಹೆಸರಿನಲ್ಲಿ ಖಾತೆಯಾಗಿರುವುದರಿಂದ ಆತನು ಮರಣ ಹೊಂದಿದ್ದು, ಪೌತಿ ವಾರಸು ಖಾತೆ ಮಾಡಲು ಶ್ರೀಮತಿ ಸಾಕಮ್ಮ ಎದುರುದಾರರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಆದೆ ಎದುರುದಾರರು ಮೂಲಳ ದಾಖಲೆ ಕೋರಿ ಅವುಗಳನ್ನು ಹಾಜರುಪಡಿಸದ ಕಾರಣ ಖಾತೆ ಮಾಡಿಲ್ಲವೆಂದು ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ.

6. 2013–14ನೇ ಸಾಲಿನಲ್ಲಿ ಖಾತೆ 794 ರಂಗಯ್ಯ ಬಿನ್ ಚಿಕ್ಕಹನುಮಯ್ಯನ ಹೆಸರಿನಲ್ಲಿರುವುದರಿಂದ ಆತನು ಮರಣ ಹೊಂದಿದ ನಂತರ ಆತನ ಹೆಂಡತಿಯ ಹೆಸರಿನಲ್ಲಿ ಪೌತಿ ಖಾತೆ ಮಾಡಲು ಅಗತ್ಯ ದಾಖಲೆಗಳನ್ನು ಸಲ್ಲಿಸಿದ್ದಾಗ್ಯೂ ಸಹ ಎದುರುದಾರರು ಖಾತೆ ಮಾಡಿರುವುದಿಲ್ಲ. ಈಗಾಗಲೇ ರಂಗಯ್ಯನ ಹೆಸರಿನಲ್ಲಿ ಖಾತೆ ಇರುವುದರಿಂದ ಮೂಲ ದಾಖಲೆಗಳ ಅವಶ್ಯಕತೆ ಇರುವುದಿಲ್ಲ. ಅಲ್ಲದೆ, ಸಾಕಮ್ಮನ ಹೆಸರಿನಲ್ಲಿ ಖಾತೆ ಮಾಡಲು ಬೇರೆ ಯಾರೂ ತಕರಾರ ಸಲ್ಲಿಸಿರುವುದು ಕಂಡುಬರುವುದಿಲ್ಲ. ಆದ್ದರಿಂದ ಎದುರುದಾರರು ಶ್ರೀಮತಿ ಸಾಕಮ್ಮನ ಹೆಸರಿನಲ್ಲಿ ಖಾತೆ ಮಾಡದೆ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ತುಮಕೂರು ತಾಲ್ಲೂಕು ಚಿಕ್ಕತೊಟ್ಲುಕೆರೆ ಗ್ರಾಮದ ಖಾತೆ ನಂ.794 ನ್ನು ಶ್ರೀಮತಿ ಸಾಕಮ್ಮ ಗಂಡ ರಂಗಯ್ಯನವರ ಹೆಸರಿನಲ್ಲಿ ಪೌತಿ ವಾರಸು ಖಾತೆ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 8/5/17

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

8/5